**<u>ಸಾಕ್ಷಿಯನ್ನು ದಿಃ 09.12.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಎಸ್ ವಕೀಲರಿಂದ.</u>**

ನಾನು ನಡೆಮಾವಿನಪುರ ಗ್ರಾಮದಲ್ಲಿ ಜನಿಸಿರುತ್ತೇನೆ. ಈ ದಾವೆಯ ಬಗ್ಗೆ ನನಗೆ ಗೊತ್ತು. ನಾನು ವಾದಿಗಳ ಮೇಲೆ ಓ.ಎಸ್ ನಂ.415/2017 ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿ. ವಾದಿಗಳು ಈ ದಾವೆಯಲ್ಲಿ ಘೋಷಣಾತ್ಮಕ ಪರಿಹಾರವನ್ನು ಕೇಳಿರುತ್ತಾರೆ. ದಾವೆಯಲ್ಲಿ ತೋರಿಸಿರುವ ಚೆಕ್ಕುಬಂದಿ ಸರಿಯಾಗಿದೆ. ದಾವಾ ಆಸ್ತಿಯು 27x23 ಅಡಿ ಇದೆ. ದಾವಾ ಆಸ್ತಿಯು ಮೊದಲಿಗೆ ಗಿರಿಯಪ್ಪ ಎನ್ನುವವರಿಗೆ ಸೇರಿತ್ತು. ಅವರು ದಾವಾ ಮನೆಯಲ್ಲಿ 2003 ರಲ್ಲಿ ಮರಣ ಹೊಂದಿರುತ್ತಾರೆ. ನಾನು 8 ನೇ ತರಗತಿಯವರೆಗೆ ಕಗ್ಗೆರೆ ಪೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನನು ಶಾಲೆಗೆ ನನ್ನ ಜನಕ ತಂದೆ- ತಾಯಿ ಸೇರಿಸಿರುತ್ತಾರೆ. ನಾನು 14 ವರ್ಷವಯಸ್ಸಿನವನಾಗುವ ತನಕ ನನ್ನ ಜನಕ ತಂದೆ-ತಾಯಿಯ ಬಳಿ ಇದ್ದೆ.

ನಾನು ಮಲ್ಲೀಪಾಳ್ಯಗ್ರಾಮದಲ್ಲಿ ಸುಮಾರು 23 ವರ್ಷಗಳಿಂದ ವಾಸ ಇದ್ದೇನೆ. ದಾವಾ ಆಸ್ತಿ ಮೂಲತಃ ಸರ್ಕಾರದ ಆಸ್ತಿ. ಸದರಿ ಆಸ್ತಿಯು ಸರ್ಕಾರದಿಂದ ಗಿರಿಯಪ್ಪನವರಿಗೆ ಮಂಜೂರಾಗಿತ್ತು. ಮಂಜೂರಾತಿ ಪತ್ರವನ್ನು ನಾನು ನೋಡಿಲ್ಲ ಮತ್ತು ಓದಿಲ್ಲ. ದಾವೆಯಲ್ಲಿ ವಾದಿಗಳು ಸಲ್ಲಿಸಿರುವ ವಂಶ ವೃಕ್ಷ ಸರಿಯಾಗಿರುತ್ತದೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನಗೆ ದತ್ತುಮಗ ಮತ್ತು ಸಾಕುಮಗ ಇವುಗಳ ಅರ್ಥ ಗೊತ್ತು. ನಾನು ಮತ್ತು ವಾದಿಗಳು ಪರಿಶಿಷ್ಟ ಜನಾಂಗದವರು. ನಮ್ಮ ಕುಟುಂಬದ ಎಲ್ಲಾ ಶುಭ ಕಾರ್ಯಗಳನ್ನು ಮಾಡಿಕೊಡಲು ಒಕ್ಕಲಿಗ ಜನಾಂಗದ ರಂಗನಾಥ ಸ್ವಾಮಿಗಳು ಬರುತ್ತಾರೆ. ಅವರು ನಡೆಮಾವಿನಪುರ ಗ್ರಾಮದವರು. ನಮ್ಮ ಜನಾಂಗದಲ್ಲಿ ಮದುವೆ ಮತ್ತು ಹೊಸಮನೆ ಕಾರ್ಯಕ್ರಮಗಳಲ್ಲಿ ಹೋಮದ ಕಾರ್ಯ ಮಾಡುತ್ತೇವೆ.

ವಾದಿಗಳು ಗಿರಿಯಪ್ಪ ಬಿನ್ ವೆಂಕಟಯ್ಯನವರಿಗೆ ಯಾವ ರೀತಿಯ ಸಂಬಂಧಿಕರು ಎಂದು ನನಗೆ ಗೊತ್ತಿಲ್ಲ. ಗಿರಿಯಪ್ಪನಿಗೆ ಅಣ್ಣ - ತಮ್ಮಂದಿರು ಇದ್ದರಾ ಎಂದರೆ ನನಗೆ ಗೊತ್ತಿಲ್ಲ. ಗಿರಿಯಪ್ಪನ ಹೆಂಡತಿಯ ಹೆಸರು ಯಲ್ಲಮ್ಮ. ಅವರಿಬ್ಬರೂ ಮರಣ ಹೊಂದಿರುತ್ತಾರೆ. ಗಿರಿಯಪ್ಪನಿಗೆ ವೆಂಕಟಯ್ಯ ಮತ್ತು ಮೂಡ್ಲಯ್ಯ ಎಂಬ ಸಹೋದರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಯಾವ ಊರಿನಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಓ.ಎಸ್ 415/2017 ರಲ್ಲಿ ಈ ದಾವೆಯ ವಾದಿಗಳ ವಿಳಾಸ ಮಲ್ಲೀಪಾಳ್ಯ ಎಂದು ತೋರಿಸಿರುತ್ತೇನೆ.

ಅವರ ವಾಸದ ಮನೆಯ ಬಗ್ಗೆ ಗೊತ್ತಿಲ್ಲ. ವಾದಿಗಳು ದಾವಾ ಆಸ್ತಿಯ ಮನೆಯಲ್ಲಿಯೇ ಇಂದಿಗೂ ವಾಸ ಇದ್ದಾರೆ ಎಂದರೆ ಸರಿಯಲ್ಲ. ನನಗೆ 7 ವರ್ಷ ವಯಸ್ಸಿನವನಿದ್ದಾಗಿನಿಂದ 14 ವರ್ಷ ತುಂಬುವವರೆಗೆ ಗಿರಿಯಪ್ಪನವರು ಸಾಕುಮಗನಾಗಿ ನನ್ನನ್ನು ಸಾಕಿದ್ದರು. ನನ್ನನ್ನು ಗಿರಿಯಪ್ಪನವರು ದತ್ತಕ್ಕೆ ತೆಗೆದು ಕೊಂಡು ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ. ಗಿರಿಯಪ್ಪ ಮತ್ತು ಯಲ್ಲಮ್ಮ ನನ್ನನ್ನು ಎಲ್ಲಾ ದತ್ತಕ ಕಾರ್ಯಕ್ರಮಗಳನ್ನು ಮಾಡಿ ನನ್ನನ್ನು ದತ್ತು ತೆಗೆದು ಕೊಂಡಿರುತ್ತಾರೆ. ನಾನು ನನ್ನ ದಾವೆಯಲ್ಲಿ ದತ್ತಕ ಕಾರ್ಯಕ್ರಮದ ಬಗ್ಗೆ ನಿರ್ಧಿಷ್ಟವಾಗಿ ಬರೆಸಿರುತ್ತೇನೆ. ಒಂದು ಗಂಟೆ ಹೋಮ ಕಾರ್ಯಕ್ರಮ ನಡೆದಿರುತ್ತದೆ. ಹೋಮದ ಹೆಸರು ಗೊತ್ತಿಲ್ಲ. ನಮ್ಮ ಗ್ರಾಮದ ವೆಂಕಟೇಶಯ್ಯ, ಗಿರಿಯಪ್ಪ, ದಾಸಗಿರಿಯಪ್ಪ ಮತ್ತು ಇತರರು ಜನರು ಮತ್ತು ನಮ್ಮ ಇತರೆ ಸಂಬಂಧಿಕರು ಸೇರಿದ್ದರು. ಇವರೆಲ್ಲರೂ ಮರಣ ಹೊಂದಿರುತ್ತಾರೆ. ದತ್ತಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬೋರಯ್ಯ, ಗುಂಡಣ್ಣ, ರಂಗಸ್ವಾಮಯ್ಯ ಬದುಕಿರುತ್ತಾರೆ. ದತ್ತಕ ಕಾರ್ಯ ಕ್ರಮದ ಛಾಯಾ ಚಿತ್ರಗಳನ್ನು ಹೊಡೆಸಿರುವುದಿಲ್ಲ . ದತ್ತಕವನ್ನು ನೊಂದಣಿ ಮಾಡಿರಸಿರುವುದಿಲ್ಲ. ನಮ್ಮ ಮನೆಯ ದೇವರು ಬೆಟ್ಟದ ರಂಗನಾಥಸ್ವಾಮಿ. ನಮ್ಮ ಮನೆಯಲ್ಲಿ ನಡೆದ ಶುಭ ಕಾರ್ಯಗಳಿಗೆ ನಮ್ಮ ಮನೆಯ ದೇವರನ್ನು ಕರೆಸುತ್ತೇವೆ. ನಾನು ಆಯಿತು ಎಂದು ಹೇಳುವ ದತ್ತಕ ಕಾರ್ಯಕ್ರಮದಲ್ಲಿ ನಮ್ಮ ಮನೆಯ ದೇವರುಗಳನ್ನು ಕರೆಸಿರುವುದಿಲ್ಲ. ನಾನು ದತ್ತಕ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸಾಕು ಮತ್ತು ದತ್ತು ತಂದೆ ಎಂದು ಏಕೆ ಬರೆಸಿದ್ದೇನೇ ಎಂದರೆ ಗಿರಿಯಪ್ಪ ನನ್ನನ್ನು ಮೊದಲು ಸಾಕಿಕೊಂಡಿದ್ದರಿಂದ ನಂತರ ದತ್ತುತೆಗೆದುಕೊಂಡಿದ್ದರಿಂದ ಆ ರೀತಿ ಬರೆಸಿರುತ್ತೇನೆ.

2003 ರಲ್ಲಿ ನಾನು ಕೂಲಿ ಕೆಲಸ ಮಾಡುತ್ತಿದ್ದೆ. ಗಿರಿಯಪ್ಪ ಮತ್ತು ಯಲ್ಲಮ್ಮ ನವರುಗಳ ತಿಥಿ ಕಾರ್ಯಗಳನ್ನು ನಾನೇ ಮಾಡಿರುತ್ತೇನೆ. ತಿಥಿ ಕಾರ್ಯದ ಕಾರ್ಡ್‌ಗಳನ್ನು ಮಾಡಿಸಿರಲಿಲ್ಲ. ನಾನು ಯಾವುದೇ ತಿಥಿ ಕಾರ್ಯವನ್ನು ಮಾಡಿಸದೇ ಇರುವುದರಿಂದ ತಿಥಿ ಕಾರ್ಡ್ ಗಳನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ನನ್ನನ್ನು 10 ವರ್ಷ ಇರುವಾಗ ದತ್ತಕ ಪಡೆಯಲಾಯಿತು ಎಂದು ತಪ್ಪಾಗಿ ಬರಸಿರುತ್ತೇನೆ. ನಿಡಿ-1 ರಿಂದ 5 ಪೋಟೋಗಳನ್ನು ನಾನು 2005 ನೇ ಇಸವಿಯಲ್ಲಿ ತೆಗೆಸಿರುತ್ತೇನೆ. ನಿಡಿ-1 ರಿಂದ 5 ರಲ್ಲಿರುವ ಪೋಟೊಗಳಲ್ಲಿ ಇರುವ ಮನೆ ದಾವಾ ಆಸ್ತಿಯಲ್ಲಿ ಇರುವ ಮನೆಗಳು ಅಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಮ್ಮ ಮನೆ ದೇವರುಗಳ ಪೋಟೋ ಇದೆ ಎಂದರೆ ಸರಿ. ನಾನು

2017 ರಲ್ಲಿ ನಮ್ಮ ಮನೆಯಲ್ಲಿ ದೇವರ ಮನೆಯನ್ನು ಕಟ್ಟಿಸಿರುತ್ತೇನೆ. ಅದರ ಪೋಟೋಗಳನ್ನು ಮುಂದಿನ ಭಾರಿ ಹಾಜರು ಮಾಡುತ್ತೇನೆ. ನಾನು ಪಂಚಾಯ್ತಿಯಿಂದ ಪರವಾನಗಿ ಪಡೆದಿಲ್ಲ.

**(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.